ದಿಃ 08.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆಃ ಶ್ರೀ ಎನ್.ಸಿ., ವಕೀಲರಿಂದ ಎದುರುದಾರರ ಪರವಾಗಿ**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

**ಪಾಟೀ ಸವಾಲು ಶ್ರೀ ಎಂ.ಟಿ.ಎಸ್ ವಕೀಲರಿಂದ ಅರ್ಜಿದಾರರ ಪರವಾಗಿ**

2. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 01.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲು ಶ್ರೀ ಎಂ.ಟಿ.ಎಸ್ ವಕೀಲರಿಂದ ಅರ್ಜಿದಾರರ ಪರವಾಗಿ**

3. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಈ ಪ್ರಕರಣದಲ್ಲಿ ಹೇಳಿರುವ ಅಪಘಾತದ ಬಗ್ಗೆ ನನ್ನ ವಿರುದ್ದ ಆಲ್ದೂರು ಪೊಲೀಸರು ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ವಿರುದ್ದ ಚಿಕ್ಕಮಗಳೂರಿನ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿರುತ್ತದೆ ಎಂದರೆ ಸರಿ. ನಾನು ಸದರಿ ದಿನ ಅತಿ ವೇಗ ಮತ್ತು ಅಜಾಗರುಕತೆಯಿಂದ ವಾಹನವನ್ನು ಚಲಾಯಿಸಿ ಅರ್ಜಿದಾರರ ಗಂಡ ದಯಾನಂದ ಪೂಜಾರಿ ಪ್ರಯಾಣಿಸುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕಾರಣದಿಂದಲೇ ನನ್ನ ವಿರುದ್ದ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಸುಳ್ಳು ಪ್ರಕರಣ ದಾಖಲು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ವಾಹನ ಚಲಾಯಿಸಲು ಪರವಾನಿಗೆ ಇರುತ್ತದೆ. ನನ್ನ ಕಾರಿಗೆ ವಿಮಾ ಸೌಲಭ್ಯ ಇತ್ತು. ಅಪಘಾತದ ದಿನ ಸದರಿ ವಿಮಾ ಪಾಲಿಸಿಯು ಚಾಲ್ತಿಯಲ್ಲಿ ಇತ್ತು. ದಿಃ 29.11.2019 ರಂದು ಹೊಸ ವಿಮಾ ಪಾಲಿಸಿಯನ್ನು ನೀಡುವಂತೆ ನಾನು IFFCO TOKIO General Insurance Co., ಗೆ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಕಂಪನಿಯು ದಿಃ 30.11.2019 ರಂದು ವಾಹನವನ್ನು ತಪಾಸಣೆ ಮಾಡಿರುತ್ತಾರೆ. ದಿಃ 01.12.2019 ರಂದು ರಜೆ ಇದ್ದ ಕಾರಣ ದಿಃ 02.12.2019 ರಂದು ನನಗೆ ವಿಮಾ ಪಾಲಿಸಿಯನ್ನು ನೀಡಿರುತ್ತಾರೆ. ಸದರಿ ವಿಮಾ ಪಾಲಿಸಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ನನ್ನ ತಪ್ಪಿನಿಂದಲೇ ಸದರಿ ಅಪಘಾತವಾಗಿರುವುದರಿಂದ ಅರ್ಜಿದಾರರಿಗೆ ನಾನೇ ಪರಿಹಾರವನ್ನು ನೀಡಲು ಬಾಧ್ಯಸ್ಥನು ಎಂದರೆ ಸರಿಯಲ್ಲ. ಅರ್ಜಿದಾರರಿಗೆ

ಪರಿಹಾರವನ್ನು ಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)
ಓ.ಹೇ.ಕೇ.ಸ.ಇ.ಎ.ಓ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ